ದಿನಾಂಕಃ **15.09.2025** ರಂದು ಆರ್‌ಡಬ್ಲ್ಯೂ - 2 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಎಸ್.ಎಸ್.ಎ. 27 ರಿಂದ 36 ನೇ ಎದುರುದಾರರ ಪರ ವಕೀಲರಿಂದಃ

ಜ್ಯೋತಿ ಸ್ಟೋರ್ಸ್ ಎಂದರೆ ನಾನು ವ್ಯಾಪಾರ ಮಾಡುತ್ತಿರುವ ಜೋಡುರಸ್ತೆಯಲ್ಲಿಯ ಅಂಗಡಿಯಾಗಿರುತ್ತದೆ. ಸದರಿ ಅಂಗಡಿಯ ಹಿಂಭಾಗದಲ್ಲಿ ನನ್ನ ಮನೆ ಇರುತ್ತದೆ. ನಮ್ಮ ಅಂಗಡಿಯಿಂದ ಸಂಜೀವ ಹೆಗ್ಡೆಯವರ ಮನೆಗೆ ಅಂದಾಜು 2 ಕಿಲೋ ಮೀಟರ್ ಅಂತರವಿರುತ್ತದೆ. ಸಂಜೀವ ಹೆಗ್ಡೆಯವರು ಉದಯವಾಣಿ ದಿನಪತ್ರಿಕೆ ಓದಲು ನನ್ನ ಅಂಗಡಿಗೆ ಬರುತ್ತಿದ್ದರು. ನನಗೆ 35 ವರ್ಷ ವಯಸ್ಸಾದಾಗಿನಿಂದ ಸಂಜೀವ ಹೆಗ್ಡೆಯವರು ನನಗೆ ಪರಿಚಯವಿರುತ್ತಾರೆ. ಆ ಸಮಯದಿಂದಲೇ ಅವರು ನನ್ನ ಅಂಗಡಿಗೆ ಬರುತ್ತಿದ್ದರು. ಆ ಸಮಯದಲ್ಲಿ ಸಂಜೀವ ಹೆಗ್ಡೆಯವರಿಗೆ ಅಂದಾಜು 40 ವರ್ಷ ವಯಸ್ಸಿರಬಹುದು.

ವೀಲುನಾಮೆಯಾಗುವ ಸಮಯದಲ್ಲಿ ಸಂಜೀವ ಹೆಗ್ಡೆಯವರಿಗೆ ಸುಮಾರು 70 ರಿಂದ 75 ವಯಸ್ಸಾಗಿರಬಹುದು. ವೀಲುನಾಮೆಯಾಗುವ

ಒಂದು ವಾರದ ಪೂರ್ವದಲ್ಲಿಯೇ ಸಂಜೀವ ಹೆಗ್ಡೆಯವರು ವೀಲುನಾಮೆಗೆ ಸಾಕ್ಷಿಯಾಗಿ ಬರಲು ನನಗೆ ತಿಳಿಸಿದ್ದರು. ವೀಲುನಾಮೆಯಾದ ದಿನವೇ ನಾನು ಸಾಕ್ಷಿ ಹಾಕಿರುತ್ತೇನೆ. ಬೆಳಗ್ಗೆ ಸುಮಾರು 8.30 ರ ಸಮಯದಲ್ಲಿ ನಾನು ವಕೀಲರ ಕಚೇರಿಗೆ ಹೋಗಿರುತ್ತೇವೆ. ಇನ್ನೊಬ್ಬ ಸಾಕ್ಷಿದಾರರಾದ ಕೃಷ್ಣಪ್ಪ ಪೂಜಾರಿಯವರು ಅದೇ ಸಮಯದಲ್ಲಿ ವಕೀಲರ ಕಚೇರಿಗೆ ಬಂದಿದ್ದರು. ಸಂಜೀವ ಹೆಗ್ಡೆಯವರು ಶಾಲೆಗೆ ಹೋಗಿದ್ದರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಅವರು ಕನ್ನಡ ಓದುತ್ತಿದ್ದರು. ವೀಲುನಾಮೆಯನ್ನು ನಾವು ವಕೀಲರ ಕಚೇರಿಗೆ ಹೋದ ನಂತರ ತಯಾರು ಮಾಡಲಾಗಿರುತ್ತದೆ. ಸಂಜೀವ ಹೆಗ್ಡೆಯವರು ವಕೀಲರಿಗೆ ದಾಖಲೆಗಳನ್ನು ನೀಡಿದ್ದು, ಏನು ದಾಖಲೆ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ವೀಲುನಾಮೆ ತಯಾರು ಮಾಡಲು ವಕೀಲರು ಅಂದಾಜು 40 ನಿಮಿಷ ತೆಗೆದುಕೊಂಡಿರಬಹುದು. ವೀಲುನಾಮೆ ತಯಾರು ಮಾಡಿದ ನಂತರ ಸುಮಾರು 15 ನಿಮಿಷಗಳ ಕಾಲ ವಕೀಲರ ಕಚೇರಿಯಲ್ಲಿಯೇ ಇದ್ದೆವು.

ವೀಲುನಾಮೆ ಮಾಡಲು ಸಂಜೀವ ಹೆಗ್ಡೆಯವರು ಕನ್ನಡ ಭಾಷೆಯಲ್ಲಿ ಮಾಹಿತಿ ನೀಡಿರುತ್ತಾರೆ. ನೊಂದಣಿ ಕಚೇರಿಗೆ ಹೋಗುವಾಗ ಸಮಯ 9.40 ರಿಂದ 10.00 ರ ಒಳಗೆ ಇದ್ದು, 10.00 ಗಂಟೆಯ ಒಳಗೆ ನೊಂದಣಿ ಕಚೇರಿ ತಲುಪಿರುತ್ತೇವೆ. ನೊಂದಣಿ ಕಚೇರಿಗೆ ಇನ್ನೊಬ್ಬ ಸಾಕ್ಷಿದಾರರೂ ಸಹಾ ನನ್ನ

ಜೊತೆ ಬಂದಿದ್ದರು. ಸಂಜೀವ ಹೆಗ್ಡೆಯವರಿಗೆ ಓದು ಬರಹ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಸಂಜೀವ ಹೆಗ್ಡೆಯವರ ಪರಿಚಯವಿರುವುದಿಲ್ಲ ಎಂದರೆ ಸರಿಯಲ್ಲ.

ನೊಂದಣಿ ಕಚೇರಿಯಲ್ಲಿ ವೀಲುನಾಮೆಯನ್ನು ವಕೀಲರು ನೊಂದಣಾಧಿಕಾರಿಗಳಿಗೆ ನೀಡಿರುತ್ತಾರೆ. ನೊಂದಣಿ ಪಕ್ರಿಯೆ ಸುಮಾರು 45 ನಿಮಿಷ ಆಗಿರಬಹುದು. ನೊಂದಣಾಧಿಕಾರಿಗಳು ವೀಲುನಾಮೆಯನ್ನು ಕನ್ನಡದಲ್ಲಿ ಓದಿ ತಿಳಿಸಿರುತ್ತಾರೆ. ವೀಲುನಾಮೆಯಾಗುವ ಸಮಯದಲ್ಲಿ ನನಗೆ ಅಂದಾಜು 68 ವರ್ಷವಾಗಿರಬಹುದು. ನನ್ನ ವಯಸ್ಸಿನ್ನು ಮತ್ತು ವಿಳಾಸವನ್ನು ಸೂಚಿಸುವ ಬಗ್ಗೆ ಆಧಾರ್ ಕಾರ್ಡ್ ಇರುತ್ತದೆ. ಅದನ್ನು ಹಾಜರುಪಡಿಸಬಹುದು.

ಕೃಷ್ಣಪ್ಪ ಪೂಜಾರಿಯವರು ನನಗೆ ಪರಿಚಯಸ್ಥರಾಗಿದ್ದು, ವೀಲುನಾಮೆಯಾಗುವ ಸಮಯದಲ್ಲಿ ಮಿಯಾರಿನ ಜೋಡುಕಟ್ಟೆಯಲ್ಲಿ ವಾಸವಾಗಿದ್ದಿರಬಹುದು. ಅಲ್ಲದೇ ಬೈಲೂರಿನ ಅವರ ಹೆಂಡತಿ ಮನೆಯಲ್ಲಿ ವಾಸವಾಗಿದ್ದರು. ಅವರು ನಮ್ಮ ಅಂಗಡಿಯಲ್ಲಿ ದಿನಸಿಯನ್ನು ಖರೀದಿಸುತ್ತಿದ್ದರು. ಆದರೆ ಅವರು ಎಲ್ಲಿಯವರು ಎಂದು ನನಗೆ ಸರಿಯಾಗಿ ಗೊತ್ತಿರುವುದಿಲ್ಲ. ಬೈಲೂರಿನಿಂದ ನನ್ನ ಅಂಗಡಿ ಮತ್ತು ಮಿಯಾರುವಿನ ಜೋಡುಕಟ್ಟೆಯಿಂದ ನನ್ನ ಅಂಗಡಿಯ ಮಧ್ಯೆ ಸಾಕಷ್ಟು ಅಂಗಡಿಗಳು ಇರುತ್ತದೆ

ಎಂದರೆ ಇರಬಹುದು. ಕೃಷ್ಣಪ್ಪ ಪೂಜಾರಿಯವರು ನನಗೆ ಅಷ್ಟಾಗಿ ಪರಿಚಯವಿರುವುದಿಲ್ಲ.

ವೀಲುನಾಮೆ ಆಗುವ ದಿನಾಂಕದಂದು ವಿಶ್ವಬಂಧು ಅಂದರೆ 2 ನೇ ಎದುರುದಾರರು ಬಂದಿರುವುದಿಲ್ಲ. ವೀಲುನಾಮೆಗೆ ಸಾಕ್ಷಿಯಾಗಬೇಕು ಎಂದು 2 ನೇ ಎದುರುದಾರರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ವೀಲುನಾಮೆಯನ್ನು ನ್ಯಾಯಾಲಯದಲ್ಲಿ ನೋಡಿರುತ್ತೇನೆ. ನಾನು 3 ನೇ ತರಗತಿವರೆಗೆ ಓದಿದ್ದೇನೆ. ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಾಗ ಯಾರೂ ನನಗೆ ಹೇಳಿಕೊಟ್ಟಿರುವುದಿಲ್ಲ. ವೀಲುನಾಮೆಗೆ ಸಂಜೀವ ಹೆಗ್ಡೆಯವರು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಮತ್ತು ಸದರಿ ವೀಲುನಾಮೆಯು ಸಂಜೀವ ಹೆಗ್ಡೆಯವರ ಸ್ವಇಚ್ಛೆಯಿಂದ ಮಾಡಿರುವ ವೀಲುನಾಮೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ವೀಲುನಾಮೆ ಮೂಲಕ ಬಂದಿರುವ ಸ್ವತ್ತು ಡಿಕ್ಲರೇಷನ್ ಮೂಲಕ ಬಂದಿದೆಯೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನನಗೆ ವೀಲುನಾಮೆಯ ವಿಚಾರಗಳು ತಿಳಿಯದೇ ಇದ್ದರೂ ಸಹಾ 2 ನೇ ಎದುರುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಜೀವ ಹೆಗ್ಡೆಯವರ ವಾರೀಸುದಾರರಿಗೆ ಸ್ವತ್ತುಗಳು ಹೋಗಬಾರದು ಎಂದು ನಾನು, 2 ನೇ ಎದುರುದಾರರು ಮತ್ತು ಇನ್ನೊಬ್ಬ ಸಾಕ್ಷಿದಾರರೂ ಸೇರಿ

ವೀಲುನಾಮೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ವೀಲುನಾಮೆಯು ಕಾನೂನು ಬಾಹಿರ ದಾಖಲೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಶ್ರೀ ಬಿ.ಕೆ. , ಅರ್ಜಿದಾರರ ಪರ ವಕೀಲರಿಂದಃ

ನಾನು 1973 ರಿಂದ ಜ್ಯೋತಿ ಸ್ಟೋರ್ಸ್ ನಲ್ಲಿ ವ್ಯಾಪಾರ ಮಾಡುತ್ತಿದ್ದೇನೆ. ಅದು ಕಿರಾಣಿ ಅಂಗಡಿಯಾಗಿರುತ್ತದೆ. ವ್ಯಾಪಾರದ ವಿಚಾರವಾಗಿ ನಾವು ಸಾಕಷ್ಟು ಜನರ ಪರಿಚಯ ಮಾಡಿಕೊಂಡಿರುತ್ತೇವೆ. ನನಗೆ ಕುಂಜ ಆಶ್ರಮದ ಹರೇರಾಮ ಪ್ರಭು ರವರ ಪರಿಚಯ ಸುಮಾರು 50 ವರ್ಷದಿಂದ ಇರುತ್ತದೆ. ಹರೇರಾಮ ಪ್ರಭು ರವರ ಜೊತೆ ನನಗೆ ಒಳ್ಳೆಯ ಸಂಪರ್ಕ ಇರುವುದಿಲ್ಲ. ಆದರೆ ಪರಿಚಯವಿದ್ದಾರೆ. ಹರೇರಾಮ ಪ್ರಭುರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ವಿಶ್ವಬಂಧು ಎಂದರೆ 2 ನೇ ಎದುರುದಾರರ ಪರಿಚಯವಿದೆ. 2 ನೇ ಎದುರುದಾರರು ಸುಮಾರು 15 ವರ್ಷದಿಂದ ಪರಿಚಯವಿದ್ದಾರೆ. ಅವರನ್ನು ನೋಡಿ ಪರಿಚಯವಿದೆ.

ಸಂಜೀವ ಹೆಗ್ಡೆಯವರ ಮಕ್ಕಳನ್ನು ನಾನು ನೋಡಿರುವುದಿಲ್ಲ. ಸಂಜೀವ ಹೆಗ್ಡೆಯವರು ಮತ್ತು ಅವರ ಮಕ್ಕಳ ನಡುವಿನ ಬಾಂಧವ್ಯ ಹೇಗಿತ್ತು ಎಂದು ನಾನು ತಿಳಿದುಕೊಂಡಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ.

ವೀಲುನಾಮೆಯು ಎಷ್ಟು ಆಸ್ತಿಗಳನ್ನು ಒಳಗೊಂಡಿದೆ ಎಂದು ನಾನು ನೋಡಿರುವುದಿಲ್ಲ. ವೀಲುನಾಮೆ ನೋಡಿ ಹೇಳಬಹುದು. ಎಷ್ಟು ಆಸ್ತಿಗಳ ವಿಚಾರವಾಗಿ ವೀಲುನಾಮೆಯಾಗಿರುತ್ತದೆ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ.

ಸಂಜೀವ ಹೆಗ್ಡೆಯವರನ್ನು ಮೊದಲ ಬಾರಿಗೆ ಎಲ್ಲಿ ಭೇಟಿಯಾಗಿರುತ್ತೇನೆ ಎಂದು ಪ್ರಶ್ನಿಸಿದರೆ ಅವರು ನಮ್ಮ ಅಂಗಡಿಗೆ ಬರುತ್ತಿದ್ದ ಕಾರಣ ಪರಿಚಯವಾಗಿದ್ದಾರೆ. ಸಂಜೀವ ಹೆಗ್ಡೆಯವರ ಮನೆಯ ಆಸುಪಾಸಿನಲ್ಲಿ ಸಾಕಷ್ಟು ಮನೆಗಳು ಇದೆ ಎಂದರೆ ಸರಿ. ಸಂಜೀವ ಹೆಗ್ಡೆಯವರ ಮನೆಯು ನಮ್ಮ ಅಂಗಡಿಗೆ ಸುಮಾರು ಎರಡೂವರೆ ಕಿಲೋಮೀಟರ್ ದೂರವಾಗಬಹುದು. ಸಂಜೀವ ಹೆಗ್ಡೆಯವರ ಮನೆಯ ನಂತರ ನಮ್ಮ ದಿನಸಿ ಅಂಗಡಿಗಿಂತ ಪೂರ್ವದಲ್ಲಿ ಬೇರೆ ಬೇರೆ ದಿನಸಿ ಅಂಗಡಿಗಳು ಇರುತ್ತದೆ ಎಂದರೆ ಸರಿ.

2 ನೇ ಎದುರುದಾರರು ಹರೇರಾಮ ಪ್ರಭು ರವರ ಮಗ ಎಂದು ನನಗೆ ಗೊತ್ತಿಲ್ಲ. ನಮ್ಮ ಅಂಗಡಿ ರಸ್ತೆಯಿಂದ ಸುಮಾರು 15 ಮೀಟರ್ ದೂರದಲ್ಲಿರುತ್ತದೆ. ನಾನು ಈ ದಿನ ನ್ಯಾಯಾಲಯಕ್ಕೆ ಸ್ನೇಹಿತರ ಕಾರಿನಲ್ಲಿ

ಬಂದಿರುತ್ತೇನೆ. ಪ್ರತಿ ದಿನ ನಮ್ಮ ಅಂಗಡಿಯನ್ನು ಬೆಳಗ್ಗೆ 8.30 ರಿಂದ 9 ಗಂಟೆಯ ಒಳಗೆ ತೆಗೆಯುತ್ತೇನೆ.

ದಿಃ 20.05.2015 ರಂದು ಜೋಡು ರಸ್ತೆಯಿಂದ ಕಾರ್ಕಳಕ್ಕೆ ನನ್ನ ಬೈಕ್ ನಲ್ಲಿ ಬಂದಿರುತ್ತೇನೆ. ಸದರಿ ದಿನ ನನ್ನ ಅಂಗಡಿ ತೆರೆದಿರುತ್ತದೆ. ನನ್ನ ಜೊತೆ ಸದರಿ ದಿನ ಬೈಕ್ ನಲ್ಲಿ ಸಂಜೀವ ಹೆಗ್ಡೆಯವರು ಬಂದಿದ್ದರು. ಸದರಿ ದಿನ ಬೆಳಗ್ಗೆ 8.10 ರಿಂದ 8.15 ರ ಸಮಯದಲ್ಲಿ ಮನೆಯಿಂದ ಹೊರಟಿದ್ದೆವು. ಸದರಿ ದಿನ ಸಂಜೀವ ಹೆಗ್ಡೆಯವರು ಬರುವಾಗ ಏನು ತಂದಿದ್ದರು ಎಂದು ನನಗೆ ತಿಳಿದಿಲ್ಲ. ನನ್ನ ಪ್ರಕಾರ 5 ಪುಟದ ದಾಖಲೆಯನ್ನು ಓದಲು ಸುಮಾರು 5 ರಿಂದ 10 ನಿಮಿಷಗಳು ಸಾಕಾಗುತ್ತದೆ.

ಕೃಷ್ಣಪ್ಪ ಪೂಜಾರಿಯವರು ಮೊದಲು ಸಾಕ್ಷಿ ಹಾಕುವ ಸಮಯದಲ್ಲಿಯೇ ಪರಿಚಯವಾಗಿರುತ್ತಾರೆ. ಅದಕ್ಕಿಂತ ಪೂರ್ವದಲ್ಲಿ ಸಂಜೀವ ಹೆಗ್ಡೆಯವರು ಕೃಷ್ಣಪ್ಪ ಪೂಜಾರಿಯವರ ಬಗ್ಗೆ ನನಗೆ ತಿಳಿಸಿರುವುದಿಲ್ಲ. ಸಂಜೀವ ಹೆಗ್ಡೆಯವರ ಆರ್ಥಿಕ ಸ್ಥಿತಿ ಚೆನ್ನಾಗಿತ್ತು. ಈ ದಿನ ನ್ಯಾಯಾಲಯಕ್ಕೆ ಬರಲು ನ್ಯಾಯಾಲಯದಿಂದ ಸಮನ್ಸ್ ಬಂದಿರುತ್ತದೆ. ಈ ದಿನ ನ್ಯಾಯಾಲಯದಲ್ಲಿ ಕೃಷ್ಣಪ್ಪ ಪೂಜಾರಿಯವರನ್ನು ಭೇಟಿಯಾಗಿದ್ದೇನೆ. ನಾನು ಈ ದಿನ ವಕೀಲರಾದ ಸಂಪತ್ ಕುಮಾರ್ ರವರನ್ನು ಭೇಟಿಯಾಗಿರುವುದಿಲ್ಲ. ನ್ಯಾಯಾಲಯಕ್ಕೆ

ಬರುವ ಪೂರ್ವದಲ್ಲಿ 2 ನೇ ಎದುರುದಾರರು ವಕೀಲರನ್ನು ಭೇಟಿಯಾಗಿರುವುದಿಲ್ಲ. ಯಾವ ರೀತಿ ಸಾಕ್ಷಿ ಹೇಳಬೇಕು ಎಂದು ಕೃಷ್ಣಪ್ಪ ಪೂಜಾರಿಯವರ ಜೊತೆ ನಾನು ಚರ್ಚೆ ಮಾಡಿರುವುದಿಲ್ಲ.

ಯಾವ ದಾಖಲೆಗೆ ಸಹಿ ಮಾಡಬೇಕು ಎಂದು ನಾನು ವಕೀಲರ ಬಳಿ ಕೇಳಿದ್ದೀರಾ ಎಂದರೆ, ಅದು ವೀಲುನಾಮೆಯಾದ ಕಾರಣ, ನಾನು ಕೇಳಿರುವುದಿಲ್ಲ. ಸಂಜೀವ ಹೆಗ್ಡೆಯವರ ಮಕ್ಕಳ ಹೆಸರನ್ನು ನಾನು ಕೇಳಿರುವುದಿಲ್ಲ. ದಿಃ 20.05.2015 2 ನೇ ಎದುರುದಾರರ ಹೆಸರನ್ನು ಕೇಳಿದ್ದೀರಾ ಎಂದರೆ, ವಕೀಲರು ವೀಲುನಾಮೆಯನ್ನು ಓದಿ ಹೇಳುವಾಗ ಕೇಳಿರುತ್ತೇನೆ. ವೀಲುನಾಮೆಯನ್ನು ವಕೀಲರು ಓದಿ ಹೇಳುವಾಗ ಸುಮಾರು 9.30 ಆಗಿರಬಹುದು.

ಪಾಟೀ ಸವಾಲನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.

ಮಧ್ಯಾಹ್ನ 3 ಗಂಟೆಗೆ ಆರ್ ಡಬ್ಲ್ಯೂ - 2 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ.ಕೆ. , ಅರ್ಜಿದಾರರ ಪರ ವಕೀಲರಿಂದಃ

2 ನೇ ಎದುರುದಾರರ ಹೇಳಿಕೆಯ ಮೇರೆಗೆ ನಾನು ನ್ಯಾಯಾಲಯಕ್ಕೆ ಹಾಜರಾಗಿದ್ದೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರರನ್ನು ನಾನು ಕಡೆಯ ಬಾರಿಗೆ ಸುಮಾರು 4 – 5 ದಿನದ ಹಿಂದೆ ಅವರು ಹೋಗಿಬರುವಾಗ ನೋಡಿರುತ್ತೇನೆ. ಮಾತುಕತೆಯಾಡಿರುವುದಿಲ್ಲ. ನಾನು ಈಗ ಉಪಯೋಗಿಸುತ್ತಿರುವ ಮೊಬೈಲ್ ಸುಮಾರು 2 – 3 ವರ್ಷದಿಂದ ಉಪಯೋಗಿಸುತ್ತಿದ್ದೇನೆ. ಈಗ ನನ್ನ ಮೊಬೈಲ್ ನಲ್ಲಿ 9916641319 ಈ ಸಂಖ್ಯೆಗೆ ಡಯಲ್ ಮಾಡಬಹುದಾ ಎಂದರೆ, ನಾನು ಮಾಡುವುದಿಲ್ಲ ಎಂದು ಉತ್ತರಿಸುತ್ತೇನೆ. ನನಗೂ ಮತ್ತು 2 ನೇ ಎದುರುದಾರರಿಗೂ ಇತ್ತೀಚೆಗೆ ತಕರಾರು ಆಗಿರುತ್ತದೆ. ಸದರಿ ನಂಬರ್ ನಿಂದ ಡಯಲ್ ಮಾಡಿ ಕರೆ ಮಾಡಿದರೆ ನನಗೂ ಮತ್ತು 2 ನೇ ಎದುರುದಾರರಿಗೂ ಇರುವ ಸಂಪರ್ಕ ಖಚಿತವಾಗುತ್ತದೆ ಎನ್ನುವ ಕಾರಣಕ್ಕಾಗಿ ನಾನು ನಂಬರನ್ನು ಡಯಲ್ ಮಾಡುವುದಿಲ್ಲ ಎಂದರೆ ಸರಿಯಲ್ಲ. ಈಗಲೂ 2 ನೇ ಎದುರುದಾರರು ನನ್ನದೇ ಅಂಗಡಿಯಿಂದ ದಿನಸಿಯನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದರೆ

ಸರಿಯಲ್ಲ. ನನ್ನ ಅಂಗಡಿಯಲ್ಲಿ ದಿನಸಿಯನ್ನು ಮಾರಾಟ ಮಾಡಲು ಬಿಲ್ ಬುಕ್ ಇಟ್ಟಿರುತ್ತೇನೆ. ಅದಕ್ಕೆ ಜಿ.ಎಸ್.ಟಿ. ಕಟ್ಟುತ್ತೇನೆ. ಗೂಗಲ್ ಪೇ ಮಾಡಿದ್ದಲ್ಲಿ ಅಂಗಡಿಯ ಲೆಕ್ಕಕ್ಕೆ ಬರುತ್ತದೆ. ಬ್ಯಾಂಕ್ ಸ್ಟೇಟ್ ಮೆಂಟ್ ನೋದರೆ 2 ನೇ ಎದುರುದಾರರು ನಮ್ಮ ಅಂಗಡಿಯಲ್ಲಿ ದಿನಸಿಯನ್ನು ಖರೀದಿಸಿದ ಬಗ್ಗೆ ತಿಳಿಯುತ್ತದೆ ಎಂದರೆ ಸರಿ.

ನಾನು ಮತ್ತು ಕೃಷ್ಣಪ್ಪ ಪೂಜಾರಿಯವರು ಒಟ್ಟಿಗೆ ವಕೀಲರ ಕಚೇರಿಗೆ ಹೋಗಿರುತ್ತೇವೆ. ನಾನು ವಕೀಲರ ಕಚೇರಿಗೆ ಹೋಗಿದ್ದೇನೆ ಎಂದು ಹೇಳಿದ ಸುಮಾರು 1 ಗಂಟೆಯ ನಂತರ ಅಲ್ಲಿಂದ ಹೊರಟಿರುತ್ತೇನೆ. ನೊಂದಣಿ ಪ್ರಕ್ರಿಯೆ ಆಗಿದೆ ಎಂದು ಹೇಳುವ ಸುಮಾರು ಒಂದುಾಕಾಲು ಗಂಟೆ ಪೂರ್ವದಲ್ಲಿ ವಕೀಲರ ಕಚೇರಿಯನ್ನು ಬಿಟ್ಟಿರುತ್ತೇನೆ. ನೊಂದಣಾಧಿಕಾರಿಯವರ ಕಚೇರಿಗೆ ಹೋದಾಗ ಅವರ ಕಚೇರಿ ತೆರೆದಿತ್ತು.

ನಾನು ದಿಃ 20.05.2015 ರಂದು 2 ನೇ ಎದುರುದಾರರನ್ನು ಭೇಟಿಯಾಗಿರುವುದಿಲ್ಲ. ಕೃಷ್ಣಪ್ಪ ಪೂಜಾರಿಯವರು ಅವರ ಬೈಕ್ ನಲ್ಲಿ ನೊಂದಣಿ ಕಚೇರಿಗೆ ಬಂದಿರುತ್ತಾರೆ. ಕೃಷ್ಣಪ್ಪ ಪೂಜಾರಿಯವರ ಮಕ್ಕಳ ಬಗ್ಗೆ ನನಗೆ ತಿಳಿದಿಲ್ಲ. ಸಂಜೀವ ಹೆಗ್ಡೆಯವರು ನನ್ನ ಬಳಿ ಕೇಸಿನ ವಿಚಾರ ಮಾತನಾಡಿರುವುದಿಲ್ಲ. 2 ನೇ ಎದುರುದಾರರು ಹೇಳಿದ ಮೇರೆಗೆ ನಾನು

ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ವಕೀಲರ ಕಚೇರಿಯಲ್ಲಿ ಒಬ್ಬರೇ ವಕೀಲರು ಇದ್ದರು. ಅವರ ಬಳಿ ಏನೆಲ್ಲಾ ಸಾಧನಾಗಳು ಇತ್ತು ಎಂದರೆ, ನಾನು ಅದನ್ನೆಲ್ಲ ನೋಡಿರುವುದಿಲ್ಲ. ಆದರೆ ಕಂಪ್ಯೂಟರ್ ಇರುವುದನ್ನು ನೋಡಿದ್ದೇನೆ. ನಾನು ವಕೀಲರ ಕಚೇರಿಗೆ ಹೋಗುವ ಪೂರ್ವದಲ್ಲಿ ವಕೀಲರು ಕಚೇರಿಯಲ್ಲಿದ್ದರು. ಕೃಷ್ಣಪ್ಪ ಪೂಜಾರಿಯವರು ನನಗೆ ವಕೀಲರ ಕಚೇರಿಯಲ್ಲಿ ಸಿಕ್ಕಿರುತ್ತಾರೆ.

ಸಂಜೀವ ಹೆಗ್ಡೆಯವರ ಹೆಂಡತಿಯ ಹೆಸರು ನನಗೆ ತಿಳಿದಿಲ್ಲ. ಸಂಜೀವ ಹೆಗ್ಡೆಯವರಿಗೆ ಹಾಗೂ ಅವರ ಹೆಂಡತಿ ಮತ್ತು ಮಕ್ಕಳಿಗೆ ಎಲ್ಲೆಲ್ಲಿ ಆಸ್ತಿಗಳು ಇದೆ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಸಂಜೀವ ಹೆಗ್ಡೆಯವರು ಸ್ವಯಂಪ್ರೇರಿತವಾಗಿ ಯಾವುದೇ ವೀಲುನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಎದುರುದಾರರಿಂದ ಬರುವ ವ್ಯಾಪಾರಕ್ಕೋಸ್ಕರ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ 2 ನೇ ಎದುರುದಾರರು ನನ್ನ ಅಂಗಡಿಗೆ ಬರುವುದಿಲ್ಲ. ಮುಂದುವರಿದು ಅವರು ಮೊದಲೂ ಸಹಾ ನನ್ನ ಅಂಗಡಿಗೆ ಬರುತ್ತಿರಲಿಲ್ಲ. ಸಂಜೀವ ಹೆಗ್ಡೆಯವರ

ತಂದೆಯ ಹೆಸರು ನನಗೆ ತಿಳಿದಿಲ್ಲ. ದಾಖಲೆಗಳನ್ನು ವಕೀಲರು ನಾನು ಹೋದ ನಂತರ ತಯಾರಿಸಿರುತ್ತಾರೆ. ಅದಕ್ಕಿಂತ ಪೂರ್ವದಲ್ಲಿ ಏನೂ ತಯಾರಿ ಮಾಡಿರುವುದಿಲ್ಲ. ನಾನು ವಕೀಲರ ಕಚೇರಿಯಲ್ಲಿ ಸುಮಾರು 45 ನಿಮಿಷದಿಂದ 1 ಗಂಟೆಯವರೆಗೆ ಕುಳಿತಿರುತ್ತೇನೆ. ಆ ಸಮಯದಲ್ಲಿ ನಮ್ಮನ್ನು ಬಿಟ್ಟು ಬೇರೆ ಯಾವುದೇ ಕಕ್ಷಿದಾರರು ಇರುವುದಿಲ್ಲ.

ನಾನು ನೋಂದಣಿಗಾಗಿ ಹೋದಾಗ ಗೋಪಾಲ ಕೃಷ್ಣ ಶೆಟ್ಟಿ ಯವರು ನೊಂದಣಾಧಿಕಾರಿಗಳಾಗಿರಬಹುದು. ಸರಿಯಾಗಿ ನೆನಪಿಲ್ಲ. ನಾನು ನೊಂದಣಾಧಿಕಾರಿಗಳ ಕಚೇರಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.